# ಸ್ಕೈ ಡೈವಿಂಗ್!







**ಅದೇ ವಿಮಾನದಲ್ಲಿ ಬಂದಿದ್ದ ಐದು ಮಂದಿ ನುರಿತ ಜಿಗಿತಗಾರರು ವಿಮಾನದ ಬಾಗಿಲು ತೆರೆಯುತ್ತಿದ್ದಂತೆಯೇ ಪುರ್ರೆಂದು ಒಟ್ಟಿಗೆ ಹಾರಿಹೋದರು! ನಂತರದ ಸರದಿ ನನ್ನದು!**

■ **ಡಾ. ಪ್ರೇಮಲತ ಬಿ**

ಕ್ಷಣಗಳಲ್ಲೇ ನಮ್ಮ ಅಡ್ರಿನಲಿನ್ ಮಟ್ಟವನ್ನು ತಾರಕಕ್ಕೇರಿಸಿ ದೇಹಕ್ಕೆ ಅಪಾರ ರೋಚಕತೆ ಮತ್ತು ಸಾಹಸೀ ಮನೋಭಾವಕ್ಕೆ ಸಂತಸ ತರಬಲ್ಲಂತಹ ಕ್ರೀಡೆಗಳಿವೆ. ಇವುಗಳಲ್ಲಿ ಅಡಗಿರುವ ಪ್ರಾಣಾಂತಿಕ ಅಪಾಯಗಳಿಂದಲೇ ಇವು ಸಾಹಸೀ ಪ್ರಿಯರಿಗೆ ಅತ್ಯಂತ ಖುಷಿ ಕೊಡಬಲ್ಲವು.

ಕಾಲಿಗೆ ಹಗ್ಗ ಕಟ್ಟಿಕೊಂಡು ಸೇತುವೆಗಳ ಮೇಲಿಂದ ನೆಗೆವ ಬಂಗೀ ಜಂಪ್ ಆಗಲಿ, ಪರ್ವತಗಳನ್ನು ಏರುವುದಾಗಲೀ, ನೀರ ಮೇಲಿನ ರ್‍ಯಾಫ್ಟಿಂಗ್ ಆಗಲೀ, ಫ್ರೀ ಸ್ಟೈಲ್ ಸ್ನೋ ಬೋರ್ಡ್ ಕ್ರೀಡೆಯಾಗಲೀ, ಪ್ಯಾರಾಶ್ಯೂಟ್ ಕಟ್ಟಿಕೊಂಡು ಆಕಾಶದಿಂದ ನೆಗೆಯುವುದಾಗಲೀ– ಈ ರೀತಿಯ ಸಾಹಸ ಕ್ರೀಡೆಗಳು ರೋಚಕವೇ. ಅದರಲ್ಲೂ ಸ್ಕೈ ಡೈವಿಂಗ್ ಎಂಬ ಕ್ರೀಡೆಗೆ ಅಗ್ರ ಸ್ಥಾನ.

ಸಾಹಸ ಕ್ರೀಡೆಗಳಿಗೆ ದುಬಾರಿ ಉಪಕರಣಗಳು, ಪೂರ್ವಸಿದ್ಧತೆಗಳ ಅಗತ್ಯವಿರುತ್ತದೆ. ಇಲ್ಲವೆಂದಲ್ಲಿ ಪ್ರಾಣಕ್ಕೇ ಅಪಾಯ. ಸ್ಕೈ ಡೈವಿಂಗ್‌ಗೆ ಹೆಲಿಕಾಪ್ಟರ್, ವಿಮಾನದ ಅಗತ್ಯ ಬೀಳುವುದರಿಂದ ಇದು ದುಬಾರೀ ಸಾಹಸ ಕ್ರೀಡೆ. ಸ್ಕೈ ಡೈವಿಂಗ್ ಸಾಹಸಿಗರನ್ನು ಬಹುವಾಗಿ ಸೆಳೆದಿದೆ. ಚಿಕ್ಕ ವಿಮಾನದಲ್ಲಿ ಸಾವಿರಾರು ಅಡಿ ಎತ್ತರಕ್ಕೇರಿ ಆಗಸದಿಂದ ನೇರ ಕೆಳಕ್ಕೆ ನೆಗೆಯುತ್ತ, ಸೀದಾ ನೆಲದೆಡೆಗೆ ಗಾಳಿ ಸೀಳುತ್ತಾ ಬೀಳುವುದೆಂದರೆ ಯಾರ ಎದೆಯಾದರೂ ಜುಂ ಎನ್ನಲೇಬೇಕು. ಮೊದಲ ಕೆಲವು ನಿಮಿಷಗಳಲ್ಲಿ ಯಾವ ಪ್ಯಾರಾಶ್ಯೂಟುಗಳೂ ತೆರೆಯದಿರುವ ಕಾರಣ ದೇಹದಲ್ಲಿ ಅಪಾಯದ ಗಂಟೆ ಬೊಬ್ಬಿರಿದು ಹೊಡೆದುಕೊಳ್ಳುತ್ತದೆ. ಅಡ್ರಿನಲಿನ್ ಎಂಬ ಹಾರ್ಮೋನು ನರನಾಡಿಗಳಲ್ಲಿ ತುಂಬಿಕೊಂಡು ಎದೆ ಬಡಿತ ಗಗನ ಸೀಳುತ್ತದೆ. ಸಾವಿರಾರು ಅಡಿಗಳ ಕಾಲ ಹೀಗೆ ಆಕಾಶದಿಂದ ಕೆಳಕ್ಕೆ ಬೀಳುತ್ತ ಸಾಗಿ ನಂತರ ಪ್ಯಾರಾಶ್ಯೂಟ್‌ಗಳನ್ನು ತೆರೆದು ಹಕ್ಕಿಯಂತೆ ಹಾರುತ್ತ, ತೇಲುತ್ತ ಮತ್ತೆ ತುಸು ದೂರ ಸಾಗಿ ನಿಧಾನವಾಗಿ ಇಳಿಯುವ ಕ್ರೀಡೆಯೇ ಸ್ಕೈ–ಡೈವಿಂಗ್ ಅಥವಾ ಆಕಾಶ ಜಿಗಿತ.

ಇದನ್ನು ವೃತ್ತಿ ಅಥವಾ ಪ್ರವೃತ್ತಿಯಾಗಿಸಿಕೊಳ್ಳಲು ತರಬೇತಿಯ ಅಗತ್ಯವಿದೆ. ನಿಪುಣ ಆಕಾಶ ಜಿಗಿತಗಾರನ ಜೊತೆಗೇ ಜಿಗಿದಲ್ಲಿ ಅನುಭವಿಸುವ ಥ್ರಿಲ್ ಬೇರೆಯೇ ಇದೆ. ಇಂತಹ ಆಕಾಶ ಜಿಗಿತವನ್ನು 'ಟ್ಯಾಂಡಮ್ ಸ್ಕೈ ಡೈವಿಂಗ್' ಅನ್ನುತ್ತಾರೆ.

ನಮ್ಮ ದೇಶದಲ್ಲಿ ಇಂತಹ ಆಕಾಶ ಜಿಗಿತದ ಐದು ಕೇಂದ್ರಗಳಿವೆ. ಮೈಸೂರು ಕೂಡ ಇವುಗಳಲ್ಲಿ ಒಂದು. ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಕೇಂದ್ರವಿದ್ದು ವರ್ಷದಲ್ಲಿ ಹಲವು ಕ್ಯಾಂಪ್‌ಗಳು ನಡೆಯುತ್ತವೆ. ಆಕಾಶ ಜಿಗಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಈ ರೀತಿಯ ತರಬೇತುದಾರರ ಒಟ್ಟಿಗೆ ಜಿಗಿತಕ್ಕೆ ವಾರಾಂತ್ಯವೋ, ವಾರದ ದಿನವೋ ಎಂಬುದರ ಆಧಾರದ ಮೇಲೆ ಸುಮಾರು 35 ಸಾವಿರದಿಂದ 45 ಸಾವಿರ ರೂಪಾಯಿಗಳ ಶುಲ್ಕವಿದೆ. ಇದರ ಫೋಟೋ ಮತ್ತು ವೀಡಿಯೊ ಪ್ಯಾಕೇಜಿಂಗ್‌ಗಳನ್ನು ಕೂಡ ನೀವು ಕಾದಿರಿಸಬಹುದು. ನಿಮ್ಮ ಈ ವೀಡಿಯೋ ಮಾಡಲು ಮೂರನೇ ವ್ಯಕ್ತಿ ನಿಮ್ಮೊಂದಿಗೆ ಜಿಗಿದು ವೀಡಿಯೊ ತೆಗೆಯುವುದು ವಿಶೇಷ.

ಮಧ್ಯಪ್ರದೇಶದ ಧಾನ, ಮಹಾರಾಷ್ಟ್ರದ ಆಂಬಿ ವ್ಯಾಲಿ, ಗುಜರಾತಿನ ದೀಸ ಮತ್ತು ಪಾಂಡಿಚೇರಿಯಲ್ಲೂ ಈ ಸೌಲಭ್ಯಗಳಿವೆ. ಈ ಪ್ರತಿ ಜಾಗದಲ್ಲಿಯೂ ಏರುವ ಎತ್ತರ ಮತ್ತು ಜಿಗಿತದ ಬೆಲೆ ಎರಡರಲ್ಲಿಯೂ ವ್ಯತ್ಯಾಸಗಳಿವೆ. ಕೆಲವೊಂದು ಕಡೆ ಬೇಡಿಕೆಯಿದ್ದಲ್ಲಿ ಮಾತ್ರ ಈ ಚಟುವಟಿಕೆಗಳು ನಡೆಯುತ್ತವೆ.

ಸ್ಕೈ ಡೈವಿಂಗ್ ಸಾಹಸೀ ಚಟುವಟಿಕೆಗಳಲ್ಲಿ ಎಲ್ಲ ವಯಸ್ಕರೂ, ಹೆಂಗಸರೂ ಭಾಗವಹಿಸಬಹುದು. ಹೃದಯದ ಖಾಯಿಲೆ, ಕಾಲಿನ ಇನ್ನಿತರ ಊನಗಳಿರುವ ಹಾಗೂ ಗರ್ಭಿಣಿಯರು ಭಾಗವಹಿಸುವಂತಿಲ್ಲ. ಆರೋಗ್ಯವಾಗಿರುವ ಮಂದಿ ಕೂಡ ಭಾಗವಹಿಸುವ ತಮ್ಮ ಬದುಕಿಗೆ ತಾವೇ ಜವಾಬುದಾರರು ಎಂದು ಬರೆದುಕೊಟ್ಟೇ ಹೋಗಬೇಕು.

ಸ್ಕೈ ಡೈವಿಂಗ್‌ನಲ್ಲಿಯೂ ನಾನಾ ವಿಧಗಳಿವೆ. ಒಬ್ಬ ತರಬೇತಿದಾರನ ಜತೆಗೆ